MVC No.213/2023 PW-1

**<u>ದಿನಾಂಕ 07.08.2025 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ ಎದುರುದಾರರಾದ ಆರ್ 2 ಪರ ಶ್ರೀ ಜೆ ಎಸ್ ವಕೀಲರಿಂದಃ</u>**

ನನ್ನ ಬಳಿ ಆಧಾರ್ ಕಾರ್ಡ್ ಇದೆ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನನಗೆ ಪಡಿತರ ಚೀಟಿ ಇದೆ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇಲ್ಲ. ಅಪಘಾತದ ಮೊದಲೇ ನನಗೆ ಮಾತನಾಡುವ ಸಮಸ್ಯೆ ಇತ್ತು ಎಂದರೆ ನಿಜ.ಈ ಬಗ್ಗೆ ನಾನು ಸರ್ಕಾರದಿಂದ ಅಂಗವಿಕಲ ಪಿಂಚಣಿ ಪಡೆಯುತ್ತಿಲ್ಲ. ಬೆಂಗಳೂರು ಮೈಸೂರು National ಹೆದ್ದಾರಿಯಲ್ಲಿ ವಿಭಜಕವನ್ನು ದಾಟಿ ಹೋಗುವಾಗ ಮಧ್ಯಾಹ್ನ 3.00 ಗಂಟೆಗೆ ಅಪಘಾತವಾಗಿರುತ್ತದೆ. ಆಗ ತುಂಬಾ ವಾಹನ ಸಂದಣಿ ಇತ್ತು ಎಂದರೆ ನಿಜ. ಡಿಕ್ಕಿ ಪಡಿಸಿದ ವಾಹನವನ್ನು ದೂರದಲ್ಲಿಯೇ ನೋಡಿರುತ್ತೇನೆ. ನಾನು ವಾಹನ ಬರುವುದನ್ನು ನಾನು ನೋಡಿರುವುದಿಲ್ಲ. ರಸ್ತೆ ಪಟ್ಟಿ ಇರಲಿಲ್ಲ. ಹಾಲು ತರಲು ನಾನು ರಸ್ತೆ ದಾಟುತ್ತಿದ್ದೆ. ನನ್ನನ್ನು ಆಸ್ಪತ್ರೆಗೆ ನನ್ನ ತಾಯಿ ಕರೆದುಕೊಂಡು ಹೋಗಿರುತ್ತಾರೆ. ವೈದ್ಯಾಧಿಕಾರಿಯವರಿಗೆ ಅಪಘಾತದ ಬಗ್ಗೆ ತಿಳಿಸಿರುತ್ತೇನೆ. ಮೊದಲು ಪುಣ್ಯ ಆಸ್ಪತ್ರೆ ನಂತರ ಬಿ ಜಿ ಲಿಂಗೇಗೌಡ ಆಸ್ಪತ್ರೆಗೆ ಹೋಗಿರುತ್ತೇನೆ. ನನ್ನ ತಪ್ಪಿ ನಿಂದ ಅಪಘಾತವಾಯಿತು ಎಂದರೆ ಸುಳ್ಳು. ಕಾರಿನ ತಪ್ಪಿನಿಂದ ಅಪಘಾತವಾಗಿಲ್ಲ ಎಂದರೆ ಸುಳ್ಳು. ಬೇರೆ ಯಾವುದೋ ವಾಹನದಿಂದ ನನಗೆ ಅಪಘಾತವಾಗಿದೆ ಎಂದರೆ ಸುಳ್ಳು. ನನಗೆ ಶಸ್ತ್ರ ಚಿಕಿತ್ಸೆಯಾಗಿದೆ. ಆಸ್ಪತ್ರೆಯಲ್ಲಿ ಒಂದು ವಾರ ಇದ್ದೆ. ನನಗೆ ಚಿಕಿತ್ಸೆ ನೀಡಿದ ವೈದ್ಯರನ್ನು ಸಾಕ್ಷಿ ಮಾಡಿಸಲು ತೊಂದರೆ ಇಲ್ಲ. ನನ್ನ ವೈದ್ಯಕೀಯ ಚಿಕಿತ್ಸೆಗಾಗಿ 1 ವರೆ ಲಕ್ಷ ರೂಪಾಯಿ ಹಣ ಖರ್ಚಾಗಿದೆ ಎಂದು ಹೇಳಿದ್ದು ಅದು ಸುಳ್ಳು ಎಂದರೆ ಸುಳ್ಳು. ಆ ಬಗ್ಗೆ ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸುಳ್ಳು.ನನಗೆ ಅಪಘಾತವಾಗುವುದಕ್ಕಿಂತ ಮುಂಚೆ ನಾನು ಕೆಲಸ ಮಾಡಿ ತಿಂಗಳಿಗೆ 25 ಸಾವಿರ ಸಂಪಾದನೆ ಮಾಡುತ್ತಿದ್ದೆ ಎಂದು ಹೇಳಿದ್ದು ಆ ರೀತಿ ಹೇಳಿರುವುದು ಸುಳ್ಳು ಎಂದರೆ ಸುಳ್ಳು. ಆ ಬಗ್ಗೆ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸುಳ್ಳು. ನನಗೆ 37 ವರ್ಷ ವಯಸ್ಸಾಗಿದೆ. ಅಪಘಾತ ಪಡಿಸಿದ ಕಾರಿಗೆ ಜಖಂ ಆದ ಬಗ್ಗೆ ನೋಡಿಲ್ಲ. ನಾನು ಮೆಡಿಕಲ್ ಬಿಲ್ಲುಗಳನ್ನು ಸೃಷ್ಟಿ ಮಾಡಿ ಹಾಜರುಪಡಿಸಿದ್ದೇನೆ ಎಂದರೆ ಸುಳ್ಳು. ನಿಪಿ-5 ರ 3 ನೇ ಬಿಲ್ಲು ಮುಖ್ಯ ಬಿಲ್ಲಿನಲ್ಲಿ ಸೇರಿಕೊಂಡಿದೆ ಎಂದರೆ ಸುಳ್ಳು. ನಿಪಿ-5 ರ

58 ನೇ ಬಿಲ್ಲು ಮುಂಗಡ ಬಿಲ್ಲಿಗೆ ಸೇರಿದ್ದು ಎಂದರೆ ಸುಳ್ಳು. ನಾನು ಮೊದಲಿನಂತೆ ಆರೋಗ್ಯವಾಗಿದ್ದೇನೆ ಎಂದರೆ ನಿಜ. ನನಗೆ ಯಾವುದೇ ಆರ್ಥಿಕ ಮತ್ತು ದೈಹಿಕ ನಷ್ಟ ಉಂಟಾಗಿಲ್ಲವೆಂದರೆ ಸುಳ್ಳು.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)**Na**

ಓ ಹೇ ಕೇ ಸ ಒ

**(ವೆಂಕಟೇಶಪ್ಪ. ವಿ)**
**ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ.**